## ಸಾಹಿತ್ಯ ಸಿಂಚನ

ಗಜಲ್

ನವಮಾಸ ಗರ್ಭದಲ್ಲಿ ಹೊತ್ತು
ಸಾಕಿ ಪೊರೆದಳು ಅಮ್ಮ
ಉಪವಾಸ ಮಾಡಿ ಆರೋಗ್ಯ
ಕೊಡೆಂದು ಬೇಡಿದಳು ಅಮ್ಮ

ಅನಕ್ಷರಸ್ಥಳಾದರು ಅಕ್ಷರ ಕಲಿಯಲು
ಪ್ರೋತ್ಸಾಹ ನೀಡುತ್ತಾ ನಿಂತವಳಲ್ಲವೇ
ಅಗಣಿತ ಗುಣಗಳ ತಾರೆ ಎಣಿಕೆಗೆ
ನಿಲುಕದೆ ಮೆರೆದಳು ಅಮ್ಮ

ಕಷ್ಟ ಕಾರ್ಪಣ್ಯಗಳನ್ನು ಸಹಿಸುತಾ
ತುಂಬು ಕುಟುಂಬದಲ್ಲಿ ಜೀವಿಸಿದಳು
ಇಷ್ಟಗಳ ಮರೆತು ಸದಾ ತಾಳ್ಮೆ
ಸಹನೆಯಿಂದ ಬಾಳಿದಳು ಅಮ್ಮ

ಮಕ್ಕಳು ಕ್ಷಣ ಕಾಲ ಕಾಣದಿದ್ದಾಗ
ಚಡಪಡಿಸಿತು ತಾಯಿ ಜೀವವದು
ಮನೆಯ ಏಳಿಗೆಗಾಗಿ ಹಗಲಿರುಳು
ಹೊಲದಲ್ಲಿ ದುಡಿದಳು ಅಮ್ಮ

ಮಮತೆಯ ಮಡಿಲು ಭಾವದ
ಕಡಲು ಧರಣಿ ತೂಕದ ದೇವತೆ
ಮಾಧುರ್ಯ ತುಂಬಿದ ಅಕ್ಷಯದ
ಪಾತ್ರೆ ಕವಿ ನೋಡಿದಳು ಅಮ್ಮ

ಶ್ರೀಮತಿ ಕವಿತಾ ಹಿರೇಮಠ ಕವಿತಾಳ

# ಪಲ್ಸ್ ಪೋಲಿಯೊ ಗುರಿ ಸಾಧಿಸಿ ಪೋಲಿಯದಿಂದ ಮಕ್ಕಳು ವಂಚಿತರಾಗಬಾರದು ತಹಸೀಲ್ದಾರ ಅರುಣ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು. ಡಿ. 6. ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಎಲ್ಲಾ ಇಲಾಖೆಯ ಅಧಿಕಾ–ರಿಗಳು ಸಮನ್ವಯತೆ ಯಿಂದ ಕೆಲಸ ಮಾಡುವ ಮೂಲಕ ಪಲ್ಸ್ ಪೋಲಿಯೊ ಮುಕ್ತ ತಾಲುಕನ್ನಾಗಿ ಮಾಡಬೇಕು ಎಂದು ತಹಸೀಲ್ದಾರ ಅರುಣ ಹೆಚ್ ದೇಸಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು.**



ಇಂದು ತಹಸೀಲ್ದಾರ ಕಚೇರಿಯಲ್ಲಿ ಕರೆದ ಪಲ್ಸ್ ಪೋಲಿಯೊ ಕಾರ್ಯಕ್ರಮದ ತಾಲುಕಾ ಮಟ್ಟದ ಟಾಸ್ಕ್ ಪೊರ್ಸ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆಯಾ ಗ್ರಾಮ ಪಂಚಾಯ್ತಿ ಪಿಡಿಒಗಳು ಗ್ರಾಮದಲ್ಲಿರುವ ದೇವಸ್ಥಾನ ಮೈಕ್ ಮೂಲಕ ಹಾಗೂ ಡಂಗೂರ ಬಾರಿಸುವ ಮುಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಹಾಗೂ ನಗರಸಭೆ ಕಸದ ವಾಹನದ ಮೂಲಕ ಸಹ ಪ್ರಚಾರ ಮಾಡಬೇಕು ಎಂದರು.


ಬಸ ನಿಲ್ದಾಣ. ರೈಲ್ವೆ ಟೇಷನ್ ಗಳಲ್ಲಿ ಪೋಲಿಯೊ ಬೂತ ಮಾಡಿ ಮಕ್ಕಳಿಗೆ ಪೋಲಿಯೊ ಹಾಕಬೇಕು ಯಾವ ಮಗು ಸಹ ಪೋಲಿಯೊ ದಿಂದ ವಂಚಿತ ರಾಗದಂತೆ ನೋಡಿ ಕೊಳ್ಳುವ ಜವಾಬ್ದಾರಿ ಆರೋಗ್ಯ ಇಲಾಖೆ ಜೋತಗೆ ಎಲ್ಲಾ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಯಾಗೀದೆ ಎನ್ನುವದನ್ನು ಮರೆಯಬಾರದು ಎಂದರು . ದಿನಾಂಕ 21.12.2025,ರಿಂದ 24.12.2025 ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮ ಇರುತ್ತದೆ ಆದ್ದರಿಂದ ಅಂ–ದು ಯಾವದೆ ಕಾರಣಕ್ಕೂ ವಿದ್ಯುತ್ ಸಂಪರ್ಕ ಕಟ್ ಯಾಗದಂತೆ ನೋಡಿಕೊಳ್ಳಬೇಕು ಎಂದು ಜೆಸ್ಕಾಂ ಅಧಿಕಾರಿಗಳಗೆ ಸೂಚನೆ ನೀಡಿ ಎಲ್ಲಾ ಅಂಗನವಾಡಿ ಕೇಂದ್ರ ಗಳಲ್ಲಿ ಕಡ್ಡಾಯವಾಗಿ ಪೋಲಿಯೊ ಬೂತ ಮಾಡಬೇಕು ಎಷ್ಟು ಪ್ರಗತಿ ಪಾಗಿದೆ ಎನ್ನುವ ಮೇಲೆ ಉಸ್ತುವಾರಿ ಯನ್ನು ಅಂಗನವಾಡಿ ಸೂಪರ ವೈಜರ ವರದಿ ತೆಗೆದುಕೊಂಡು ನನಗೆ ಕೊಡಬೇಕು ಅಲಕ್ಷೆ ಮಾಡಬಾರದು ಎಂದು ಸುಪರ ವೈಜರಗಳಿಗೆ ತಾಕೀತು ಮಾಡಿದರು.

ತಾ. ಪ.ಇಒ ಚಂದ್ರಶೇಖರ ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ .ಬಿಇಓ ಬಸಲಿಂಗಪ್ಪ ಜವಳಗೇರಾ ಟಿ ಹೆಚ್ಒ ಡಾ ಅಯ್ಯನಗೌಡ. ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾ–ರಿಗಳಾದ ಡಾ ಸುರೇಶ. ಡಾ ಮೇರಿ. ಡಾ ನಾಗರಾಜ ಡಾ. ಶ್ವೆತಾಂಬರಿ.ಹಿರಿಯ ಆರೋಗ್ಯ ನಿರೀಕ್ಷರಾದ ರಂಗನಾಥ ಗುಡಿ ಸಂಗನಗೌಡ ಪಾಟೀಲ. ಕ್ಷೇತ್ರ ಆರೋಗ್ಯ ಶಿಕ್ಷಣಾದಿಕಾ–ರಿಗಳಾದ ಬಾಲಪ್ಪ ನಾಯಕ. ಗೀತಾ ಹಿರೆಮಠ ಜೇಸ್ಕಾ. ಸಿಡಿಪಿಓ. ಸಾರಿಗೆ ಇಲಾಖೆ. ಕಾರ್ಮಿಕ ಇಲಾಖೆ.ಐಎಂಎ ಅಧ್ಯಕ್ಷರು.ಆರೋಗ್ಯ ಇಲಾಖೆಯ ತ್ರಿವೇಣಿ ಃಕಒ, ಜಿಲ್ಲಾ ಖಈಗಿ ಮೇಲಿ ್ವಚಾರಕರುರಾಘವೇಂದ್ರ,ಹನುಮಂತ ಸೇರಿದಂತೆ ನಗರ ಆರೋಗ್ಯ ಇಲಾಖೆ. ತಾಲುಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಸಭೆಯಲ್ಲಿದ್ದರು.

# ಹಣದ ಬೇಡಿಕೆ ಆರೋಪ : ಪ.ಪಂ ಮೇಲೆ ಲೋಕಾಯುಕ್ತ ದಾಳಿ, ದಾಖಲೆ ವಶ

❑ ನೈಜ್ಯ ದೆಸೆ ನ್ಯೂಸ್

ಕುಕನೂರ: ಪಟ್ಟಣ ಪಂಚಾಯಿತಿ ಸಿಬ್ಬಂದಿಯಿಂದ 'ಬಿ–ಖಾತಾ ಮಾಡಿಕೊಡುವುದಕ್ಕಾಗಿ ಹಣದ ಬೇಡಿಕೆ ಇಟ್ಟಿದ್ದಾರೆ' ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಶುಕ್ರವಾರ ಸಾಯಂಕಾಲ ಕುಕನೂರ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಮೇಲೆ ದಿಡೀರ್ ದಾಳಿ ನಡೆಸಿ ದಸ್ತಾವೇಜುಗಳನ್ನು ವಶಪಡಿಸಿಕೊಂಡಿದ್ದಾರೆ.



ಸಂಜೆ ಆರಂಭವಾದ ಪರಿಶೀಲನೆ ತಡರಾತ್ರಿ ತನಕ ಮುಂದುವರಿದಿದ್ದು, ಕಾರ್ಯಾಲಯದ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿ ಕೊಠಡಿಗಳಲ್ಲಿನ ಹಲವು ದಾಖಲೆಗಳನ್ನು ಲೋಕಾಯುಕ್ತ ಸಿಬ್ಬಂದಿ ಸ್ವಾಧೀನಪಡಿಸಿಕೊಂಡು, ತನಿಖೆಗೆ ಸಂಬಂಧಪಟ್ಟಂತೆ ಕೊಪ್ಪಳ ಲೋಕಾಯುಕ್ತ ಕಚೇರಿಗೆ ಸಾಗಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಲೋಕಾಯುಕ್ತ ಅಧಿಕಾರಿ ಸುನಿಲ್ ನೇತೃತ್ವದಲ್ಲಿ ನಡೆದ ದಾಳಿಯ ವೇಳೆ ಅವರು ವರದಿಗಾರರಿಗೆ ಮಾತನಾಡಿ, "ಬಿ–ಖಾತಾ ಮಾಡಿಕೊಡಲು ಹಣ ಬೇಡಿಕೆ ಇಟ್ಟಿದ್ದಾರೆ ಎಂಬ ದೂರಿನ ಆಧಾರದ ಮೇಲೆ ದಾಳಿ ನಡೆಸಲಾಗಿದೆ. ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡಿದ್ದು, ತನಿಖೆ ಮುಂದುವರಿದಿದೆ. ತನಿಖೆ ಪೂರ್ಣಗೊಂಡ ನಂತರ ವಿವರಗಳನ್ನು ಹಂಚಿಕೊಳ್ಳಲಾಗುತ್ತದೆ," ಎಂದು ತಿಳಿಸಿದ್ದಾರೆ. ಹಣದ ಬೇಡಿಕೆ ಆರೋಪ : ಪ.ಪಂ ಮೇಲೆ ಲೋಕಾಯುಕ್ತ ದಾಳಿ, ದಾಖಲೆ ವಶ ದಾಳಿಯ ವೇಳೆ ಲೋಕಾಯುಕ್ತ ಇಲಾಖೆಯ ಸಿಬ್ಬಂದಿಗಳು ಸಹ ಹಾಜರಿದ್ದರು.

## ದಲಿತ ವಿದ್ಯಾರ್ಥಿ ಪರಿಷತ್ ಸಮಾಜ ಕಲ್ಯಾಣ ಇಲಾಖೆಯಿಂದ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಅಂಬೇಡ್ಕರ್ ಅವರು ಈ ನಾಡಿಗೆ ಸಂವಿಧಾನ ಕೊಟ್ಟು ಸಮಸಮಾಜದ ಕನಸು ಕಂಡವರು, ಅವರ ಕನಸು ನನಸು ಆಗಬೇಕಾದರೆ ಅಂಬೇಡ್ಕರ್ ನಡೆದಂತ ದಾರಿಯಲ್ಲಿ ಹಿರಿಯರು ಆದಿಯಾಗಿ ಯುವ ಸಮೂಹ ನಡೆಯಬೇಕಾಗಿದೆ. ಅಂದಾಗ ಮಾತ್ರ ಸಮಸಮಾಜದ ಭವ್ಯ ಕನಸು ಈಡೇರುತ್ತದೆ ಎಂದು ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕ ಮೌನೇಶ ಜಾಲವಾಡಗಿ ಹೇಳಿದರು.**



ದಲಿತ ವಿದ್ಯಾರ್ಥಿ ಪರಿಷತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ ಅಂಬೇಡ್ಕರ್ ಪರಿ ನಿರ್ವಾಣ ದಿನವನ್ನು ನಗರದ ಮಹಾತ್ಮಗಾಂಧಿ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಇದಕ್ಕೂ ಮುಂಚೆ ಪ್ರವಾಸಿ ಮಂದಿರದಿಂದ ಕ್ಯಾಂಡಲ್ ಹಿಡಿದು ದೀಪ ಬೆಳಗಿಸಿ ಗೌರವ ಸಮರ್ಪಣೆ ಸಲ್ಲಿಸಿದರು. ಈ ವೇಳೆ: ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಚಂದ್ರಶೇಖರ್, ಸಹಾಯಕ ನಿರ್ದೇಶಕ ಯಂಕಪ್ಪ, ಹಿರಿಯ ಹೋರಾಟಗಾರ ಎಚ್.ಎನ್.ಬಡಿಗೇರ್, ದಲಿತ ವಿದ್ಯಾರ್ಥಿ ಪರಿಷತ್ ಸಂಚಾಲಕ ಮೌನೇಶ ಜಾಲವಾಡಗಿ, ಹುಸೇನಪ್ಪ ಅಮರಾಪುರ, ಬಸವರಾಜ ನಾಯಕ, ಬಸವರಾಜ ಬಾದರ್ಲಿ, ಸೇರಿದಂತೆ ಅಂಬೇಡ್ಕರ್ ವಸತಿ ನಿಲಯದ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿ ಪುಷ್ಪ ನಮನ ಸಲ್ಲಿಸಿದರು.

# ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ಗೌರವಧನ ಬಿಡುಗಡೆಗೆ ಒತ್ತಾಯಿಸಿ ಎನ್ಪಿಎಸ್ ನೌಕರರ ಸಂಘ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025ರ ಗಣತಿ ಕಾರ್ಯದ ಮೊದಲ ಕಂತಿನ ಗೌರವ ಧನವನ್ನು ಗಣತಿದಾರರ ಖಾತಗೆ ಜಮಾ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಎನ್ಪಿಎಸ್ ನೌಕರರ ಸಂಘದಿಂದ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಅವರಿಗೆ ಮನವಿ ಪತ್ರ ಸಲ್ಲಿಸಿದರು.**



ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ತಾಲೂಕಿನಲ್ಲಿ ಶಿಕ್ಷಕರು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿ ಜಿಲ್ಲೆಗೆ ಮಾದರಿಯಾಗಿದ್ದಾರೆ. ಈಗಾಗಲೇ ಸಮೀಕ್ಷೆ ಕಾರ್ಯಯದ ಗೌರವ ಧನದ ಅನುದಾನವನ್ನು ಸರ್ಕಾರ ರಾಯಚೂರು ಜಿಲ್ಲೆಗೆ ಬಿಡುಗಡೆಗೊಳಿಸಿದ್ದು ಕೂಡಲೇ ಜಿಲ್ಲಾಡಳಿತವು ಗೌರವಧನವನ್ನು ಶೀಘ್ರವೇ ಸಮೀಕ್ಷೆ ನಡೆಸಿದ ಗಣತಿದಾರರ ಮತ್ತು ಮೇಲ್ವಿಚಾರಕರ ಖಾತೆಗಳಿಗೆ ಜಮಾ ಮಾಡಬೇಕೆಂದು ಒತ್ತಾಯಿಸಿದರು. ನಂತರತಹಸೀಲ್ದಾರರು ಸಮೀಕ್ಷೆಯ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡವ ಭರವಸೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಎನ್ಪಿ–ಎಸ್ ಸಂಘದ ತಾ.ಅಧ್ಯಕ್ಷ ಸುರೇಶ ಕುಮಾರ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಮಳ್ಳಿ, ಹಿಂದುಳಿದ ವರ್ಗಗಳ ನೌಕರರ ಸಂಘದ ಅಧ್ಯಕ್ಷ ವೈ. ಶ್ರೀನಿವಾಸ,ಮಾದಿಗ ನೌಕರರ ಸಂಘದ ಅಧ್ಯಕ್ಷ ಸುರೇಶ ಜಗ್ಲಿ ಹಾಗೂ ಹಿರಿಯ ಶಿಕ್ಷಕರಾದ ಬೀರಪ್ಪ , ಶಿವಾರಾಜ ,ವೈ ಶ್ರೀನಿವಾಸ, ಆಂಜನೇಯ, ನಾಗರಾಜ್, ರಾಘವೇಂದ್ರ, ವಿರುಪಾಕ್ಷಿ, ಮೌನೇಶ, ರಘುನಂದನ್, ಕೊಂಡರೆಡ್ಡಿ, ಕೃಷ್ಣಮೂರ್ತಿ,ಅರವ ವೆಂಕಟ ಕೃಷ್ಣಯ್ಯ, ಆಂಜನೇಯ ಯಾದವ್, ರವಿ ಹುಲಿಯಾಪುರ,ಹರ್ಷವರ್ಧನ, ಬಸನಗೌಡ ಪೊಲೀಸ್ ಪಾಟೀಲ್, ರಾಘವೇಂದ್ರ, ಸೂಗುರೇಶ ಪಾಟೀಲ್ ಹದ್ದಿನಾಳ ಉಪಸ್ಥಿತರಿದ್ದರು.

# ಸಹನಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ 69 ನೇ ಮಹಾಪರಿನಿರ್ವಾಣ ದಿನ



❑ ನೈಜ್ಯ ದೆಸೆ ನ್ಯೂಸ್

**ಮುದಗಲ್: ಪಟ್ಟಣದ ಕಿಲ್ಲಾದಲ್ಲಿರುವ ಸಹನಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ 69 ನೇ ಮಹಾಪ–ರಿನಿರ್ವಾಣ ದಿನ . ಕಾರ್ಯಕ್ರಮವನ್ನು ಡಾ. ಬಿ .ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಶಾಲಾ ಶಿಕ್ಷಕಿಯರಾದ ನಿಲುಬಾಯಿ ಮತ್ತು ಕವಿತಾ ಪೂಜೆ ಸಲ್ಲಿಸುವುದರ ಮೂಲಕ ಚಾಲನೆ ನೀಡಲಾಯಿತು.**

ಶಾಲೆಯ ಮುಖ್ಯ ಗುರುಗಳಾದ ಆದಪ್ಪ ಸರ್ ಅವರು ಕಾರ್ಯಕ್ರಮದ ಕು–ರಿತು ಮಾತನಾಡಿ ಸಂವಿಧಾನ ಶಿಲ್ಪಿಗಳೂ ಆದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂಸ್ಮರಣೆ ದಿನದ ಗೌರವ ಪೂರ್ವಕ ನಮನಗಳು. ಶೋಷಿತ ಸಮುದಾಯಗಳ ಏಳಿಗೆಗಾಗಿ ಬದುಕನ್ನೇ ಮುಡಿಪಾಗಿಟ್ಟ ಮಹಾನ್ ಮಾನವತಾವಾದಿ ಶ್ರೀ ಅಂಬೇಡ್ಕರ್ ಅವರ ಚಿಂತನೆ ನಮಗೆಲ್ಲಾ ಇಂದಿಗೂ ದಾರಿದೀಪ. ಎಂದು ತಿಳಿಸಿದರು. ನಂತರದಲ್ಲಿ ಭಾರತದ ಸಂವಿಧಾನದ ಬಗ್ಗೆ ಶಾಲೆಯ ಶಿಕ್ಷಕಿಯರಾದ ಕಾವೇರಿ, ಪ್ರಿಯಾಂಕ ಹೀನಾ ಬೇಗಂ ಮತ್ತು ಅಸ್ಮ ಬೇಗಂ ಮಾತನಾಡಿ ದೇಶದ ದೀನ ದಲಿತರು, ಹಿಂದುಳಿದ ವರ್ಗದ ಬದುಕಿಗೆ ಸಂವಿಧಾನವೆಂಬ ಹೊಸ ಬೆಳಕನ್ನು ನೀಡಿದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂಸ್ಮರಣೆಯ ದಿನದ ಭಕ್ತಿ ಪೂರ್ವಕ ಪ್ರಣಾಮಗಳು.

ಅಂಬೇಡ್ಕರ್ ಅವರ ಸಂವಿಧಾನವು ಹಿಂದುಳಿದ ವರ್ಗದ ಅಭ್ಯುದಯಕ್ಕೆ ನೀಡಿದ ಹಕ್ಕುಗಳನ್ನು ಮರಳಿ ಗಳಿಸಿ, ಉಳಿಸಿಕೊಳ್ಳಲು ಅವರ ಉದಾತ್ತ ಚಿಂತನೆಯೇ ನಮಗೆ ಆಸರೆ. ಅವರ ಹೋರಾಟದ ಬದುಕು ನಮ್ಮ ಸ್ಫೂರ್ತಿ ಎಂದು ತಿಳಿಸಿದರು.. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಆಯೇಶಾ ಬಾನು ನಿರೂಪಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸೂರ್ಯಚಂದ್ರ ಹೇಗೆ ಶಾಶ್ವತವೋ ಸಂವಿಧಾನವು ಅಷ್ಟೇ ಶಾಶ್ವತ: ಅರುಣ್ ಕುಮಾರ್ ದೇಸಾಯಿ

❑ ನೈಜ್ಯ ದೆಸೆ ನ್ಯೂಸ್

**ಡಾ.ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನವು ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ. ನಮ್ಮ ದೇಶದ ಮಹಾನ ಗ್ರಂಥವು ಆಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಸೂರ್ಯ ಚಂದ್ರ ಇರುವ ತನಕ ಅಜರಾಮರವಾಗಿರುತ್ತಾರೆಂದು ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಹೇಳಿದರು.**



ತಾಲುಕಾ ಆಡಳಿತ ವತಿಯಿಂದ ಮಿನಿ ವಿಧಾನ ಸೌಧದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಶನಿವಾರ ಡಾ.ಬಿ.ಆರ್.ಅಂಬೇಡ್ಕರ್ ಇಹಲೋಕ ತೇಜಿಸಿದ ದಿನ ಸೂರ್ಯ ಚಂದ್ರ ಹೇಗೆ ಶಾಶ್ವತನೋ ಅದೇ ರೀತಿಯಲ್ಲಿ ಅಂಬೇಡ್ಕರ್ ಬರೆದ ಸಂವಿಧಾನ ಶಾಶ್ವತವಾಗಿರುತ್ತದೆ. ಸಮಾನತೆ, ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ ಸಂವಿಧಾನ ಅಂಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಹೋಗೋಣ ಎಂದರು. ನಮ್ಮ ಬದುಕಿಗೆ ನಿತ್ಯ ದರ್ಶನ ಮಾಡುವ ಮೂಲಕ ಬೆಳಕು ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನಾವೆಲ್ಲರೂ ಸ್ಮರಿಸಬೇಕು ಹೊರತು ಮರೆಯಬಾರದು. ಡಾ.ಬಿ.ಆರ್.ಅಂಬೇಡ್ಕರ್ ಅವರು ಅಸಮಾನತೆ. ಜಾತಿ ವ್ಯವಸ್ಥೆ, ವಿರುದ್ಧ ಜೀವನದುದ್ದಕ್ಕೂ ಹೋರಾಟ ಮಾಡುವ ಮೂಲಕ ಎಲ್ಲರೂ ಮನುಷ್ಯರಂತೆ ಬಾಳುವಂತೆ ಮಾಡಿದ ಮಹಾನ್ ಚೇತನ ಎಂದು ನ್ಯಾಯಾವಾದಿ ಗುಡಿಹಾಳ ನಿರುಪಾದೆಪ್ಪ ಹೇಳಿದರು.

ತಹಶೀಲ್ದಾರ್ ಕಚೇರಿಯ ನಂತರ ಪಿಡಬ್ಲ್ಯೂಡಿ ಕ್ಯಾಂಪಿನಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ: ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ತಾಲೂಕು ಪಂಚಾಯತಿ ಇಒ ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ವೆಂಕಟೇಶ, ಪ.ಪಂಗಡ ಇಲಾಖೆ ಭೀಮಣ್ಣ, ಖಾಜಿ ಮಲ್ಲಿಕ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಫ್.ಮಸ್ಕಿ, ದಲಿತ ಮುಖಂಡರಾದ ಆರ್. ಅಂಬ್ರೂಸ್, ನರಸಪ್ಪ ಕಟ್ಟಿಮನಿ, ಮರಿಯಪ್ಪ ಸುಕಾಲಪೇಟೆ, ಹನುಮಂತಪ್ಪ ಗೋಮರ್ಸಿ, ಹೆಚ್.ಎನ್.ಬಡಿಗೇರ್, ಪಂಪಾಪತಿ ಬೂದಿವಾಳ, ಅಯ್ಯಪ್ಪ ವಕೀಲರು, ಹನುಮಂತಪ್ಪ ವಕೀಲರು, ಎಸ್.ಎಫ್.ಖಾದ್ರಿ, ಸೋಮನಾಥ ಸೂಲಂಗಿ, ಅಶೋಕ ನಂಜಲದಿನ್ನಿ, ದವಲಸಾಬ ದೊಡ್ಡಮನಿ, ವೀರೇಶ ಹಂಚಿನಾಳ, ಶರಣಬಸವ ಮಲ್ಲಾಪುರ. ಬಾಲರಾಜ, ಸೇ–ರಿದಂತೆ ಇನ್ನಿತರೆ ಮುಖಂಡರು ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

07 ಹಿಂದೂಸ್ತಾನ್ ಕಾಪರ್ ನೇಮಕಾತಿ 2025 64 ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಹಿಂದೂಸ್ತಾನ್ ಕಾಪರ್ ನೇಮಕಾತಿ 2025: 64 ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹಿಂದೂಸ್ತಾನ್ ಕಾಪರ್ ಲಿಮಿಟೆಡ್ ನವೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 17–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಪೋಸ್ಟ್ ಹೆಸರು ಸೂಪರ್ವೈಸರಿ (ಜೂನಿಯರ್ ಮ್ಯಾನೇಜರ್) ಖಾಲಿ ಹುದ್ದೆಗಳ ಸಂಖ್ಯೆ 64 ಹುದ್ದೆಗಳು ಅರ್ಹತಾ ಡಿಪ್ಲೊಮಾ, ಸಿಎ, ಐಸಿಡಬ್ಲ್ಯೂಎ, ಪದವಿ, ಎಲ್‌ಎಲ್‌ಬಿ, ಬಿಇ/ ಬಿ.ಟೆಕ್, ಪದವಿ, ಎಂಇ/ ಎಂ.ಟೆಕ್, ಪಿಜಿ ಪದವಿ/ ಡಿಪ್ಲೊಮಾ, ಎಂಬಿಎ– https://hindustancopper.com/Page/Career_New Official Website: hindustancopper.com ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17–ಡಿಸೆಂಬರ್–2025

# ಲಾಟರಿ ಮೂಲಕ ಜಿಲ್ಲೆಯ ನಾಲ್ಕು ಮರಳು ಬ್ಲಾಕ್ ಹರಾಜು ಪ್ರಕ್ರಿಯೆ ಪೂರ್ಣ

❑ ನ್ಯೆಜ್ಯ ದೆಸೆ ನ್ಯೂಸ್



ಕಲಬುರಗಿ: ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಜಿಲ್ಲೆಯ ಅಫಜಲಪೂರ ಮತ್ತು ಜೇವರ್ಗಿ ತಾಲೂಕಿನ ಒಟ್ಟು ನಾಲ್ಕು ಮರಳು ಬ್ಲಾಕ್ ಹರಾಜು ಪ್ರಕ್ರಿಯೆಯನ್ನು ಲಾಟರಿ ಎತ್ತುವ ಮೂಲಕ ಪೂರ್ಣಗೊಳಿಸಲಾಯಿತು.

ಜಿಲ್ಲೆಯ ಅಫಜಲಪೂರ ತಾಲೂಕಿನ ಘತ್ತರಗಾ ಗ್ರಾಮದ ಸರ್ವೇ ನಂ.62, 63, 12 ಹಾಗೂ 13(ಪಿ) ಯಲ್ಲಿನ 12.20 ಎಕರೆ ಮತ್ತು ಹವಳಗಾ ಗ್ರಾಮದಲ್ಲಿನ ಸರ್ವೇ ನಂ.10, 2, 105, 101, 106(ಪಿ) ರಲ್ಲಿನ 17 ಎಕರೆ, ಜೇವರ್ಗಿವ ತಾಲೂಕಿನ ನೆಲೋಗಿ ಗ್ರಾಮದ ಸರ್ವೇ ನಂ. 48, 4/2, 514/1, 514/2, 516, 517(ಪಿ)ರಲ್ಲಿನ 13.03 ಎಕರೆ ಮತ್ತು ಮದರಿ ಗ್ರಾಮದ ಸರ್ವೇ ನಂ.17, 8, 182(ಪಿ) ರಲ್ಲಿನ 12.25 ಎಕರೆ ಜಮೀನಿನಲ್ಲಿರುವ ಮರಳು ಬ್ಲಾಕ್ ಹರಾಜಿಗೆ ಕರೆಯಲಾದ ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ 15 ಜನ ಬಿಡ್ಡುದಾರರು ಏಕ ರೂಪದ ದರ ನಮೂದಿಸಿದ ಕಾರಣ ನಿಯಮಾವಳಿಯ ಪ್ರಕಾರ ಲಾಟರಿ ಎತ್ತುವ ಮೂಲಕ ಯಶಸ್ವಿ ಬಿಡ್ಡುದಾರರನ್ನು ಅಂತಿಮಗೊಳಿಸಲಾಯಿತು.

ಹಟ್ಟಿ ಚಿನ್ನದ ಗಣಿ ಸಂಸ್ಥೆಯು ಅಫಜಲಪುರ ತಾಲೂಕಿನ ಟಾಕಳಿ ಗ್ರಾಮದಲ್ಲಿ ದಾಸ್ತಾನು ಮಾಡಿರುವ ಮರಳು ವಿಲೇವಾ–ರಿಗೆ ಕೋರಿಕೆ ಸಲ್ಲಿಸಿದ್ದು, ಸರ್ವೆ ಮಾಡಿ ಸ್ಟಾಕ್ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಜೇವರ್ಗಿ ತಾಲೂಕಿನ ಜೇವರ್ಗಿ(ಕೆ) ಮತ್ತು ಜೇವರ್ಗಿ(ಬಿ) ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜಿನಲ್ಲಿ ಮರಳು ತೆಗೆಯಲು ಸಣ್ಣ ನೀರಾವರಿ ಇಲಾಖೆ ಪ್ರಸ್ತಾವನೆ ಸಲ್ಲಿಸಿದ್ದರಿಂದ ಜಂಟಿ ಸಮೀಕ್ಷೆ ನಡೆಸಿ ಇಲ್ಲಿಯೂ ಮರಳು ವಿಲೇವಾರಿಗೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಡಿ.ಸಿ. ನಿರ್ದೇಶನ ನೀಡಿದರು.


ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು, ಜಿಲ್ಲೆಯದಾದ್ಯಂತ ಅಕ್ರಮ ಮರಳು ದಂಧೆ ನಡೆಯದಂತೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು. ಇನ್ನು ಇಂದಿಲ್ಲಿ ಮರಳು ಬ್ಲಾಕ್ ಹರಾಜು ಪ್ರಕ್ರಿಯೆ ಪೂರ್ಣಗೊಂಡ ಕಾರಣ ಬಿಡ್ಡುದಾರರು ನಿಯಮಾವಳಿಯಂತೆ ಮರಳು ಹರಾಜು ಮಾಡಬೇಕೆಂದರು.

ಕಲ್ಲು ಪುಡಿ ಘಟಕ ಸ್ಥಾಪನೆಗೆ ಒಪ್ಪಿಗೆ ಜಿಲ್ಲಾ ಕಲ್ಲು ಪುಡಿ ಘಟಕ ನಿಯಂತ್ರಣ ಸಮಿತಿ ಸಭೆಯಲ್ಲಿ ಸಭೆಗೆ ಮಂಡನೆಯಾದ ಮೂರು ಪ್ರಸ್ತಾವನೆಗಳ ಪೈಕಿ ಚಿಂಚೋಳಿಯ ಖಾನಾಪುರ ಗ್ರಾಮದ ಸರ್ವೇ ನಂ.51/6/2 ರಲ್ಲಿನ 1 ಎಕರೆ ವಿಸ್ತೀರ್ಣದ ಪಟ್ಟಾ ಜಮೀನಿನಲ್ಲಿ ಹೊಸದಾಗಿ ಕಲ್ಲು ಪುಡಿ ಘಟಕ ಸ್ಥಾಪನೆಗೆ ಮತ್ತು ಕಲಬುರಗಿ ತಾಲೂಕಿನ ಬೇಲೂರ(ಜೆ) ಗ್ರಾಮದಲ್ಲಿನ ಸರ್ವೇ ನಂ.55/1 ರಲ್ಲಿನ 1 ಎಕರೆ ವಿಸ್ತೀರ್ಣದ ಕಲ್ಲು ಪುಡಿ ಘಟಕ ವರ್ಗಾವಣೆಗೆ ಸಭೆ ಒಪ್ಪಿಗೆ ಸೂಚಿಸಿತು. ಇದೇ ಸಂದರ್ಭದಲ್ಲಿ ಜರುಗಿದ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಭೆಯಲ್ಲಿ ಸಲ್ಲಿಕೆಯಾದ ಪ್ರಸ್ತಾವನೆಗಳ ಬಗ್ಗೆ ಪರಿಶೀಲಿಸಲಾಗಿ, ಇತ್ತೀಚಿನ ಸುಪ್ರೀಂ ಕೋರ್ಟ್ ನಿರ್ದೇಶನ ಪ್ರಕಾರ ಸಂರಕ್ಷಿತ ಅರಣ್ಯ ಪ್ರದೇಶದ ಸುತ್ತ ಒಂದು ಕಿ.ಮೀ ವ್ಯಾಪ್ತಿಯನ್ನು ಬಫರ್ ಜೋನ್ ಎಂದು ಪರಿಗಣಿಸಿದ್ದು, ಇಲ್ಲಿ ಗಣಿ ಚಟುವಟಿಕೆ ನಷೇಧಿಸಲಾಗಿದೆ.

## ಸನ್ ರೈಸ್ ಕಾಲೇಜಿನಲ್ಲಿ ಮಹಾ ಪರಿನಿರ್ವಾಣ ದಿನದಂದು ಡಾ.ಬಿ ಆರ್ ಅಂಬೇಡ್ಕರ್ ಅವರಿಗೆ ನಮನ

❑ ನ್ಯೆಜ್ಯ ದೆಸೆ ನ್ಯೂಸ್

ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರಿನಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದಂದು ಮೌನಾಚರಣೆ ಮಾಡುವುದರ ಮೂಲಕ ಗೌರವ ನಮನಗಳನ್ನು ಸಲ್ಲಿಸಲಾಯಿತು ಅವರ ತತ್ತ್ವಗಳು ಇಂದಿಗೂ ನಮ್ಮೊಂದಿಗೇ ಜೀವಂತವಾಗಿವೆ.



ಅಂಬೇಡ್ಕರ್ ಅವರು ಕೇವಲ ಸಂವಿಧಾನ ರಚನಾಕಾರರಲ್ಲ. ಅವರು ಸಮಾನತೆಯ ಯೋಧ, ಮಾನವ ಹಕ್ಕುಗಳ ರಕ್ಷಕ, ಶಿಕ್ಷಣಕ್ಕೆ ಜೀವ ಕೊಟ್ಟ ಮಹಾನ್ ಚಿಂತಕ. ಸಮಾಜದಲ್ಲಿ ಇರುವ ಅಸಮಾನತೆ, ಅನ್ಯಾಯ ಮತ್ತು ದಮನವನ್ನು ದೂರ ಮಾಡುವುದೇ ಅವರ ಬದುಕಿನ ಗುರಿಯಾಗಿತ್ತು.ಅವರು ಹೇಳಿದ್ದ ಒಂದು ಮಾತು ಇಂದಿಗೂ ನಮ್ಮನ್ನು ಬೆಳಗಿಸುತ್ತದೆ: "ಶಿಕ್ಷಣವೇ ಶಕ್ತಿ." ಶಿಕ್ಷಣ ಪಡೆದರೆ ಮಾತ್ರ ಜೀವನ ಬದಲಾಗುತ್ತದೆ, ಸಮಾಜ ಬದಲಾಗುತ್ತದೆ, ರಾಷ್ಟ್ರ ಬಲವಾಗುತ್ತದೆ ಎಂದು ಅವರು ನಂಬಿದ್ದರು ಅಂತಹ ಮಹಾನ್ ವ್ಯಕ್ತಿಗೆ ಇಂದು ನಮನಗಳನ್ನು ಸಲ್ಲಿಸಿದರು.

# ಕಲ್ಮಲ ಗ್ರಾಮದಲ್ಲಿ ಏಡ್ಸ್ ಸೋಂಕು ತಡೆಗೆ ಸಮುದಾಯದ ಸಹಕಾರಕ್ಕಾಗಿ ಕಲಾ ತಂಡದ ಮೂಲಕ ಜಾಗೃತಿ



❑ ನ್ಯೆಜ್ಯ ದೆಸೆ ನ್ಯೂಸ್

ರಾಯಚೂರು: ಆಕಸ್ಮಿಕವಾಗಿಯಾಗಲಿ ಅಥ–'ವಾ ಜೀವನದ ತಪ್ಪು ಹೆಜ್ಜೆಗಳಿಂದಾಗಲಿ ವ್ಯಕ್ತಿಯು ಹೆಚ್‌ಐವಿ ಸೋಂಕಿಗೆ ಒಳಗಾಗಿ ಜೀವನದ ಸುಂದರ ಕ್ಷಣಗಳನ್ನು ದೂರ ಮಾಡಿಕೊಳ್ಳಬಾರದು, ಅದರಲ್ಲೂ ಅಪ–ರಿಚಿತರೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕವು ಸೋಂಕು ಹರಡಲು ಪ್ರಮುಖ ಪಾತ್ರ ವಹಿಸುತ್ತದ.

' ಈ ದಿಶೆಯಲ್ಲಿ ನಾವೆಲ್ಲರೂ ಜಾಗೃತರಾಗೋಣ ವೆಂದು ರಾಯಚೂರು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೇನ್‌ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಡ್ಯಾಪ್ಕೋ ಹಾಗೂ ಶ್ರೀ ಕೃಷ್ಣ ಪಾರಿಜಾತ ತಂಡ ಲೋಕಾಪೂರ ರವರ ಕಲಾಪ್ರದರ್ಶನದ ಮೂಲಕ, ಕಲ್ಮಲ ಗ್ರಾಮದ ಮಾರುತಿ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರಿಗೆ ಜನಜಾಗೃತಿ ನೀಡಲಾಯಿತು.

ಈ ಸಂಧರ್ಭದಲ್ಲಿ ಗ್ರಾಮ ಪಂಚಾಯತ ಸದಸ್ಯ ಈಶ್ವರ ರಂಗಾ, ಹಿರಿಯ ಮುಖಂಡರಾದ ಯಲ್ಲಪ್ಪ ಓತಪ್ಯಾಟಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಬಾನುಕಾಂತ ರೆಡ್ಡಿ, ಮುಖಂಡರಾದ ಗಂಗಪ್ಪ, ಶ್ರೀನಿವಾಸ, ನರಸಪ್ಪ, ಬಸ್ಸಪ್ಪ ಬಾಗಲಿ, ಕುಮಾರಸ್ವಾಮಿ, ರಂಗನಾಥ, ಆಶಾ ಕಾರ್ಯಕರ್ತೆಯರು, ತಾಯಂದಿರು ಉಪಸ್ಥಿತರಿದ್ದರು.

# ಸರ್ವೋದಯ ಪಬ್ಲಿಕ್ ಪ್ರೌಢ ಶಾಲೆಯಲ್ಲಿ ಒಂದು ದಿನದ ಯೋಗ ಕಾರ್ಯಾಗಾರ

❑ ನ್ಯೆಜ್ಯ ದೆಸೆ ನ್ಯೂಸ್



ಯೋಗ ಸನ್ನಿಧಿ ಜ್ಞಾನವಿದ್ಯಾಪೀಠ ಟ್ರಸ್ಟ್ ವತಿಯಿಂದ ಸರ್ವೋದಯ ಪಬ್ಲಿಕ್ ಪ್ರೌಢ ಶಾಲೆಯಲ್ಲಿ ಒಂದು ದಿನದ ಯೋಗ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಯೋಗ ಗುರು ಅನ್ನದಾನಯ್ಯ ಅವರು, ಯೋಗಾಭ್ಯಾಸದಿಂದ ಮಕ್ಕಳಲ್ಲಿ ಏಕಾಗ್ರತೆ ಮತ್ತು ನೆನಪಿನ ಶಕ್ತಿಗೆ ಉತ್ತಮ ಅಭ್ಯಾಸವಾಗಿದ್ದು, ವಿದ್ಯಾರ್ಥಿಗಳು ಇದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.


ಶಾಲೆಯ ಮಕ್ಕಳಿಗೆ ಪ್ರಥಮವಾಗಿ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾದ ಯೋಗಾಭ್ಯಾಸದ ಅವಧಿಯಲ್ಲಿ, ಮೊದಲು ಯೋಗಭ್ಯಾಸದ ಕುರಿತು ಉಪನ್ಯಾಸವನ್ನು ನೀಡಲಾಯಿತು. ನಂತರ ಉತ್ಕಟಾಸನ, ಗೋಮುಖಾಸನ, ಹಿಮ್ಮಡಿ ಶ್ವಾಸಭ್ಯಾಸ ಮತ್ತು ವೀರಭದ್ರಸನಗಳಂತಹ ಪ್ರಮುಖ ಯೋಗಾಸನಗಳನ್ನು ತರಬೇತಿ ನೀಡಿ, ಅವುಗಳ ಕುರಿತು ಮಾಹಿತಿಗಳನ್ನು ಒದಗಿಸಲಾಯಿತು. ಪ್ರಾಣಾಯಾಮಗಳಲ್ಲಿ ವಿಶೇಷವಾಗಿ ಉಸಿರಾಟದ ಶ್ವಾಸ ಮತ್ತು ಪ್ರಶ್ವಾಸದ ಅಭ್ಯಾಸ ಹಾಗೂ ಓಂಕಾರದ ಅಭ್ಯಾಸದಂತಹ ಹಂತಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಲಾಯಿತು.

ಅಂತಿಮವಾಗಿ, ಧ್ಯಾನದ ಬಗ್ಗೆಯೂ ಅಭ್ಯಾಸವನ್ನು ಮಾಡಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಮೈಬುಬ್ ಖಾನ್ ಅವರು ಮಾತನಾಡಿ, ಯೋಗವು ನಮ್ಮ ದೈನಂದಿನ ಚಟುವಟಿ–ಕೆಯ ಒಂದು ಭಾಗ ಎಂದು ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ರಂಗಪ್ಪ, ಶಿಕ್ಷಕಿಯರಾದ ತೇಜಸ್ವಿರಿ, ಶರತ್ ಹಾಗೂ ಶಾಲಾ ಮಕ್ಕಳು ಈ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

## ಡಿಕೆ ಬ್ರದರ್ಸ್‌ಗೆ ದೆಹಲಿ ಪೊಲೀಸ–ರಿಂದ ನೋಟಿಸ್

❑ ನ್ಯೆಜ್ಯ ದೆಸೆ ನ್ಯೂಸ್

ನವದೆಹಲಿ: ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಹೋದರ ಡಿ.ಕೆ.ಸುರೇಶ್ ಅವರಿಗೆ ದೆಹಲಿ ಪೊಲೀಸರು ನೋಟಿಸ್ ನೀಡಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್ಥಿಕ ಅಪರಾಧ ವಿಭಾಗದಿಂದ ನೋಟಿಸ್ ನೀಡಲಾಗಿದೆ. ಪ್ರಕರಣದ ತನಿಖೆಯ ಭಾಗವಾಗಿ ವಿವರವಾದ ಹಣಕಾಸು ಮತ್ತು ವಹಿವಾಟು ಮಾಹಿತಿಯನ್ನು ಕೋರಿ ನೋಟಿಸ್ ಕೊಟ್ಟಿದ್ದಾರೆ.



ನ.29 ರಂದು ನೋಟಿಸ್ ನೀಡಿರುವ ಪೊಲೀಸರು, ಡಿ.19 ರೊಳಗೆ ತನಿಖಾಧಿಕಾರಿಗಳ ಮುಂದೆ ಹಾಜರಾಗಲು ಅಥವಾ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸೂಚನೆ ನೀಡಿದ್ದಾರೆ. ಡಿ.ಕೆ.ಸುರೇಶ್ ಅವ–ರಿಗೂ ನೋಟಿಸ್ ನೀಡಿರುವ ದೆಹಲಿ ಪೊಲೀಸರು, ಎಷ್ಟು ದುಡ್ಡು ನೀಡಿದ್ದೀರಿ, ಯಾವ ಉದ್ದೇಶಕ್ಕೆ ಬಳಕೆಯಾಗಿದೆ, ಹಣವನ್ನು ನೀಡಿದ್ದು ಹೇಗೆ, ಎಷ್ಟು ಹಣ ನೀಡಿದ್ದೀರಿ ಎಂಬ ಪ್ರಶ್ನೆಗಳಿಗೆ ವಿವರ ಕೇಳಿದ್ದಾರೆ.

# ಪರಮಪೂಜ್ಯ ಶ್ರೀ ಲಿಂ. ಶರಣ ಹನುಮೇಶ ತಾತನವರ 17ನೇ ಪುಣ್ಯಾರಾಧನೆ



❑ ನ್ಯೆಜ್ಯ ದೆಸೆ ನ್ಯೂಸ್

ಜಯೇಂದ್ರ ತಾತನವರು ಹನುಮೇಶ ಹರ ಗುರು ಚರಮೂರ್ತಿಗಳ ಹಾಗೂ ಗಣ್ಯರ ಅಧ್ಯಕ್ಷತೆಯಲ್ಲಿ ಸರ್ವಭಕ್ತರ ಸಮ್ಮುಖದಲ್ಲಿ ಹಾಗೂ ಪರಮ ಪೂಜ್ಯ ಶ್ರೀ ಶ್ರೀ ಶರಣ ಜಯೇಂದ್ರ ತಾತನವರ ದಿವ್ಯಸಾನಿಧ್ಯದಲ್ಲಿ ದಿನಾಂಕ: 06–12–2025 ಶನಿವಾರದಂದು ದ್ವಿತೀಯ ತಿಥಿ ಬೆಳಿಗ್ಗೆ 6 ಗಂಟೆಗೆ ಶ್ರೀಮಠದ ಮೇಲೆ ಧ್ವಜಾರೋಹಣ ನೆರವೇರಿಸಿದರು ನಂತರ 8 ಗಂಟೆಗೆ ಹೋಮ ಕಾರ್ಯಕ್ರಮ ಮಾಡಲಾಯಿತು.

ತದನಂತರ ಬೆಳಿಗ್ಗೆ 10 ಗಂಟೆಗೆ ಕತ್ರ ಗದ್ದುಗೆಗೆ ಹೂವಿನ ಅಲಂಕಾರ ಪೂಜೆಯೊಂದಿಗೆ ಪರಮಪೂಜ್ಯ ಶ್ರೀಶ್ರೀ ಜಯೇಂದ್ರ ತಾತನವ–ರಿಂದ ಪೂಜೆ ನೆರವೇರಿಸಿದರು ನಂತರ ಶ್ರೀಮಠದ ಶ್ರೀಗಳಿಂದ ತೀರ್ಥ ಪ್ರಸಾದ ಸ್ವೀಕರಿಸಿದ ನಂತರ ಮಧ್ಯಾಹ್ನ 12 ಗಂಟೆಗೆ ದಾರ್ಮಿಕ ಕಾರ್ಯಕ್ರಮ ಹಾಗೂ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಶರಣ ಶ್ರೀ ಹನುಮೇಶ್ ತಾತನವರ 17ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವನ್ನು ಶ್ರೀ ಮಠದ ಪೀಠಾಧ್ಯಕ್ಷರಾದ ಶ್ರೀ ಜಯೇಂದ್ರ ತಾತನವರ ಉದ್ಘಾಟನೆ ಮಾಡಿದರು ಸಾನಿಧ್ಯವನ್ನು ಶ್ರೀ ಶ್ರೀ ಸೂರ್ಯನಾರಾಯಣ ಸ್ವಾಮಿಗಳು ಜಳಗೇರಾ ಹಾಗೂ ಶ್ರೀ ಮರುಳಾಧ್ಯ ಸ್ವಾಮಿಗಳು ಕಾಡು ದ್ದೇಶ್ವರ ಮಠ ಹಡಗಲಿ. ಮುಖ್ಯ ಅತಿಥಿಗಳು ಸ್ಥಾನವನ್ನ ಶ್ರೀ ಶಿವಶಂಕರಗೌಡ ನಂದ್ಯಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಮುದುಗಲ್ ಹಾಗೂ ವಿಶ್ವಕರ್ಮ ಸಮಾಜದ ರಾಯಚೂರ ಜಿಲ್ಲಾಧ್ಯಕ್ಷರ ಮೌನೇಶ್ ಸಾಲವಾಡಗಿ ಶಿವನಗೌಡ ಹಡಗಲಿ ಮಾದೇವಪ್ಪ ಜಂಬಲ್ದಿನಿ ರವೀಂದ್ರ ಪತ್ತಾರ್ ಗುಡ್ಡಣ್ಣ ಪತ್ತಾರ್, ಮನೋಹರ್ ಮೈಲಾಪುರ್. ಮುಂತಾದವರು ಇದ್ದರು..

ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಕಲ ಶ್ರೀಗಳಿಗೆ ಸದ್ಭಕ್ತರಿಗೆ ಹಾಗೂ ರಾಯಚೂರ ಜಿಲ್ಲಾ ಹಾಲಿ ಮತ್ತು ಮಾಜಿ ಶಾಸಕರುಗಳಿಗೆ ಮತ್ತು ಸಮಾಜದ ಗಣ್ಯವ್ಯಕ್ತಿಗಳಿಗೆ ಹಾಗೂ ವಿಶ್ವಕರ್ಮ ಸಮಾಜದ ಮುಖಂಡರುಗಳಿಗೆ ಶ್ರೀ ಮಠದಿಂದ ಶ್ರೀಮಠದ ಕಮೀಟಿಯ ವತಿಯಿಂದ ಸನ್ಮಾನ ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಶ್ರೀ ಹನುಮೇಶ ತಾತನವರ ಮಠದ ಟ್ರಸ್ಟ, ಸುಕ್ಷೇತ್ರ ನಂದಿಹಾಳಮಠ ತಾ: ಲಿಂಗಸುಗೂರ ಉಪ್ಪಾರನಂದಿಹಾಳ ಗ್ರಾಮದ ಸಕಲ ಸದ್ಭಕ್ತ ಮಂಡಳಿ ಸುತ್ತಮುತ್ತಲಿನ ಗ್ರಾಮದ ಗುರು–ಹಿರಿಯರು ಮತ್ತು ಭಕ್ತಾಧಿಗಳು ಉಪಸ್ಥಿತ–ರಿದ್ದರು.. ಕಾರ್ಯಕ್ರಮದ ನಿರೂಪಣೆಯನ್ನು ಜಗದೀಶ್ ಶಿಕ್ಷಕರು ನೆರವೇರಿಸಿದರು.

# ನೂರು ವರ್ಷದ ಹಿಂದೆ ದಬ್ಬಾಳಿಕೆ ದೌರ್ಜನ್ಯಕ್ಕೆ ಪ್ರತಿರೋಧ ತೋರಲು ಹುಟ್ಟಿಕೊಂಡ ಪಕ್ಷ ಸಿಪಿಐ

❑ ನ್ಯೆಜ್ಯ ದೆಸೆ ನ್ಯೂಸ್



100 ವರ್ಷಗಳ ಹಿಂದೆ ನಮ್ಮ ಹಿರಿಕರ ಬದುಕು ನರಕವಾಗಿದ್ದ ದಿನಗಳನ್ನ ನಾವು ಕಂಡಿಲ್ಲ ಮತ್ತು ಅನುಭವಿಸಿಲ್ಲ. ನಮ್ಮ ತಾತ, ಅಜ್ಜಿ, ಅಪ್ಪ, ಅಮ್ಮ, ಈ ನರಕವನ್ನು ಅನುಭವಿಸಿ ದಬ್ಬಾಳಿಕೆ ವಿರುದ್ದ ಸಿಡಿದೆದ್ದ ಆ ಸಂದರ್ಭದಲ್ಲಿ ಈ ಸಿಪಿಐ ಪಕ್ಷ ಪ್ರಾರಂಭವಾಯಿತು. ಪಕ್ಷ ಜಮೀನ್ದಾರರ ವಿರುದ್ದ, ಕಂಪನಿ ಮಾಲೀಕರ ವಿರುದ್ದ ಪ್ರತಿರೋಧ ತೋ–ರಿದ ಕಾರಣಕ್ಕಾಗಿ ಈಗ ಅಲ್ಪ ಸ್ವಲ್ಪ ದಬ್ಬಾಳಿಕೆ ನಿಂತಿದೆ.

ನಮ್ಮ ಕೂಲಿ ಕನಿಷ್ಠ 36 ಸಾವಿರ ನೀಡಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರು ಸಹ ಇನ್ನೂ ಜಾರಿಗೆ ಬಂದಿಲ್ಲ. ಜಾ–ರಿಗಾಗಿ ನಾವು ನೀವು ಹೋರಾಡೋಣ ನಮ್ಮ ಸಿಪಿಐಎಂ ನಿಮ್ಮ ಜೊತೆಗೆ ಸದಾ ಇರುತ್ತೇವೆ ಎಂದು ಸಿಪಿಐಎಂ ಪಕ್ಷದ ತಾಲೂಕಾ ಸಮಿತಿ ಕಾರ್ಯದರ್ಶಿ ಸಿಪಿಐ ನ ಶತಮಾನೋತ್ಸವ ಜಾಥಾ ಬಹಿರಂಗ ಸಭೆಯಲ್ಲಿ ಶುಭಕೋರಿ ಮಾತನಾಡಿದರು.

ಶತಮಾನೋತ್ಸವ ಜಾಥಾ ಸಿಂಧನೂರಿಗೆ ಆಗಮಿಸಿದ ಹಿನ್ನಲೆಯಲ್ಲಿ ನಗರದ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಭಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಸಾತಿ ಸುಂದರೇಶ ಅವರು ಭಾರತ ಕಮ್ಯೂನಿಸ್ಟ್ ಪಕ್ಷ ಸಿಪಿಐ ದುಡಿಯುವ ಜನರ ಮೊಟ್ಟಮೊದಲ ಪಕ್ಷ, ದೇಶ ಜಮೀನ್ದಾ–ರೀ, ಸಾಮ್ರಾಜ್ಯಶಾಹಿ, ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಬಳಲುತ್ತಿರುವಾಗ ಹುಟ್ಟಿಕೊಂಡ ಪಕ್ಷ ಸಿಪಿಐ 1925 ಡಿಸೆಂಬರ್ 26 ರಂದು ಪ್ರಾರಂಭವಾದ ಪಕ್ಷ ಅಂದಿನಿಂದ ಇಂದಿನವರೆಗೂ ನಿರಂತರವಾಗಿ ದುಡಿಯುವವರ ಪರವಾಗಿ ಹೋರಾಟ ರೂಪಿಸುತ್ತಾ ಬಂದಿದೆ.

ಪ್ರಸ್ತುತ ಸನ್ನಿವೇಶದಲ್ಲಿ ದೇಶದಲ್ಲಿ ಕೋಮುವಾದಿ ಪಕ್ಷ ರಾಜ್ಯದಲ್ಲಿ ಶ್ರೀಮಂತರ ಪರವಾಗಿರುವ ಪಕ್ಷಗಳು ಅಸ್ತಿತ್ವದಲ್ಲಿದ್ದು, ಬಡಜನರ ಕೂಗು ಇವರಿಗೆ ಕೇಳಿಸುವುದಿಲ್ಲ. ಸಾರ್ವಜನಿಕರ ಸಂಪತ್ತನ್ನು ಲೂಟಿ ಮಾಡಲು ಕೆಲವು ವ್ಯಕ್ತಿಗಳಿಗೆ ಬೆಂಬಲ ನೀಡಿದೆ ಅವರ ಪರವಾಗಿರುವ ಖಾನೂನುಗಳನ್ನು ತರುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಪಕ್ಷ ಎಲ್ಲಾ ಜನರೊಂದಿಗೆ ಸಂವಾದ ನಡೆಸುತ್ತಾ ವಾಸ್ತವ ಪರಸ್ಥಿತಿಯನ್ನು ಜನರಿಗೆ ತಿಳಿಸುವ ಹಿನ್ನಲೆಯಲ್ಲಿ ಪಕ್ಷ ಹುಟ್ಟಿಕೊಂಡ ನೂರು ವರ್ಷದ ಸಂದರ್ಭದಲ್ಲಿ ಸಮತಾ ರಾಜ್ಯದ ಕನಸುಗಳೊಂದಿಗೆ ಶಕ್ತಿಯ ಸಂಘರ್ಷದ ಶತಮಾನದ ಪಯಣವನ್ನು ಪ್ರಾರಂಭಿಸಿದ್ದೇವೆ. ಇಡೀ ಡಿಸೆಂಬರ್ ತಿಂಗಳು ಕರ್ನಾಟಕದಲ್ಲಿ ಜಾಥಾ ಸಂಚರಿಸಿಲಿದೆ. ಇಂದು ಶನಿವಾರ ಸಿಂಧನೂರಿಗೆ ಬಂದಿದ್ದೇವೆ, ಶ್ರಮ ಶಕ್ತಿಯನ್ನು ಒಗ್ಗೂಡಿಸುವುದಕ್ಕಾಗಿ ಎಲ್ಲರೂ ಶ್ರಮಿಸಸೋಣ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಪಿಐಎಂಎಲ್ ಮಾಸ್ ಲೈನ್ ಪಕ್ಷದ ಮುಖಂಡ ಡಿ.ಹೆಚ್.ಪೂಜಾರ್, ಜಮಾಅತೆ ಇಸ್ಲಾಮಿ ಹಿಂದ್ ಅಧ್ಯಕ್ಷ ಹುಸೇನಸಾಬ್, ರೈತ ಸಂಘದ ಮುಖಂಡ ಅಮೀನ್ ಪಾಷಾ ದಿದ್ದಿಗಿ, ಶರಣಪ್ಪ ಮಳ್ಳಿ ಶುಭಕೋರಿ ಮಾತನಾಡಿದರು. ವೇದಿಕೆ ಮೇಲೆ ಸಿಪಿಐ ಪಕ್ಷದ ರಾಜ್ಯ ಮುಖಂಡರಾದ ಡಾ.ಕೆ.ಎಸ್.ಜನಾರ್ಧನ, ಪ್ರಸನ್ನಕುಮಾರ, ಮೌನೇಶ, ಚಂದ್ರಶೇಖರ ಕ್ಯಾತನಟ್ಟಿ, ಬಾಷುಮೀಯಾ, ಶಾಂತ ಗೋರೇಬಾಳ, ಸುಲೋಚನಾ, ಚನ್ನಮ್ಮ, ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### (MD Ayurveda Samhita & Siddhanta)

ಸಂಹಿತ ಮತ್ತು ಸಿದ್ಧಾಂತದಲ್ಲಿ ಎಂಡಿ (ಆಯುರ್ವೇದ) ಎಂಬುದು ಪ್ರಾಚೀನ ಆಯುರ್ವೇದ ಗ್ರಂಥಗಳು (ಸಂಹಿತಗಳು) ಮತ್ತು ಮೂಲಭೂತ ತತ್ವಗಳನ್ನು (ಸಿದ್ಧಾಂತಗಳು) ಕೇಂದ್ರೀಕರಿಸುವ 3 ವರ್ಷಗಳ ಸ್ನಾತಕೋತ್ತರ ವಿಶೇಷತೆಯಾಗಿದ್ದು, ಂಖಂಕಉಇಖ ಮೂಲಕ ಃಂಒಖ ಪದವಿ ಮತ್ತು ಪ್ರವೇಶದ ಅಗತ್ಯವಿದೆ; ಇದು ಶಿಕ್ಷಕರು ಅಥವಾ ಸಂಶೋಧಕರ ಪಾತ್ರಗಳೊಂದಿಗೆ ಮೂಲ ಆಯುರ್ವೇದ ಜ್ಞಾನದಲ್ಲಿ ತಜ್ಞರನ್ನು ಉತ್ಪಾದಿಸಲು ಶಾಸ್ತ್ರೀಯ ಪಠ್ಯ ವ್ಯಾಖ್ಯಾನ, ಸಿದ್ಧಾಂತ ಮತ್ತು ತತ್ವಶಾಸ್ತ್ರವನ್ನು ಕಲಿಸುವ ವೈದ್ಯಕೀಯವಲ್ಲದ, ಸಂಶೋಧನಾ-ಆಧಾರಿತ ಕೋರ್ಸ್ ಆಗಿದೆ ಮತ್ತು ಚರಕ, ಸುಶ್ರುತ ಮತ್ತು ಅಷ್ಟಾಂಗ ಹೃದಯದಂತಹ ಪಠ್ಯಗಳ ಆಳವಾದ ಅಧ್ಯಯನವನ್ನು ಒಳಗೊಂಡಿರುತ್ತದೆ. ಕೋರ್ಸ್: ಮೂಲ ಆಯುರ್ವೇದ ಗ್ರಂಥಗಳು (ಸಂಹಿತೆಗಳು) ಮತ್ತು ತಾತ್ವಿಕ ತತ್ವಗಳಲ್ಲಿ (ಸಿದ್ಧಾಂತಗಳು) ಆಳವಾಗಿ ಅಧ್ಯಯನ.ಅವಧಿ: ಸಾಮಾನ್ಯವಾಗಿ 3 ವರ್ಷಗಳು. ಮೂಲಭೂತ ಆಯುರ್ವೇದ ತತ್ವಗಳಲ್ಲಿ ವೈದ್ಯಕೀಯವಲ್ಲದ, ಸಂಶೋಧನೆ ಆಧಾರಿತ ವಿಶೇಷತೆ, ಡಾಕ್ಥಬ್ ಅನ್ನು ಉಲ್ಲೇಖಿಸುತ್ತದೆ. ಶಾಸ್ತ್ರೀಯ ಗ್ರಂಥಗಳ ಆಳವಾದ ಅಧ್ಯಯನ (ಚರಕ ಸಂಹಿತ, ಸುಶ್ರುತ ಸಂಹಿತ, ಅಷ್ಟಾಂಗ ಹೃದಯ). ಸಾಂಪ್ರದಾಯಿಕ ಆಯುರ್ವೇದ ಸಿದ್ಧಾಂತಗಳು, ರೋಗನಿರ್ಣಯ ವಿಧಾನಗಳು ಮತ್ತು ಚಿಕಿತ್ಸಕ ಚೌಕಟ್ಟುಗಳು.ಪಠ್ಯಗಳನ್ನು ಅಥ-'ೖಸಲು ಸಂಸ್ಕೃತ ಭಾಷೆ.ಸಮಕಾಲೀನ ಅಭ್ಯಾಸಗಳೊಂದಿಗೆ ಶಾಸ್ತ್ರೀಯ ಜ್ಞಾನದ ಏಕೀಕರಣ. ಸಂಹಿತ ಮತ್ತು ಸಿದ್ಧಾಂತ ಎನ್ನುವುದು ಪಂಚಾಂಗ ವಿಭಾಗದ ಈ ಕೋರ್ಸ್ನಲ್ಲಿ, ಕಾಲಿಕ ಆಯುರ್ವೇದ ಗ್ರಂಥಗಳು ಹಾಗು ಆಯುರ್ವೇದ ಸಿದ್ಧಾಂತಗಳು ತತ್ತ್ವಗಳು ಥಿಯರಿ & ದರ್ಶನ ಶಾಸ್ತ್ರ ಇತಿಹಾಸ, ತತ್ವಪ್ರಕಾರ, ಹಳೆಯ ಶಾಸ್ತ್ರ-ಗಮ್ಯ ಗ್ರಂಥಾಲಯ ಇತ್ಯಾದಿಗಳನ್ನು ಅಧ್ಯಯನ ಮಾಡಲಾಗುತ್ತದೆ.ಈ ಕೋರ್ಸ್ ಸಿದ್ಧಾಂತ ಶಾಸ್ತ್ರ-ಓದು, ಸಂಶೋಧನಾ ವಿಧಾನಗಳು ಮತ್ತು ಆಯುರ್ವೇದ ತತ್ತ್ವಗಳ ಚಿತ್ರಣ + ಅವುಗಳ ಆಧುನಿಕ ಅನ್ವಯ ಮೇಲೆ ಒತ್ತು ನೀಡುತ್ತದೆ. ಆಯುರ್ವೇದ ಸಂಹಿತಾ ಮತ್ತು ಸಿದ್ಧಾಂತ ಕಾರ್ಯಕ್ರಮದಲ್ಲಿ ಎಂಡಿ ಪ್ರವೇಶಕ್ಕೆ ಸಾಮಾನ್ಯವಾಗಿ ಆಯುರ್ವೇದ ಔಷಧ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಪದವಿ (BAMS) ಪದವಿ ಮತ್ತು ಅಖಿಲ ಭಾರತ ಆಯುಷ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿ (AIAPGET) ಅರ್ಹತೆ ಅಗತ್ಯವಾಗಿತ್ತು. ಆಯುಷ್ ಸಚಿವಾಲಯದ ಅಡಿಯಲ್ಲಿ ಂಂಅಅಅ (ಆಯುಷ್ ಪ್ರವೇಶ ಕೇಂದ್ರೀಯ ಸಮಾಲೋಚನೆ ಸಮಿತಿ) ಕೌನ್ಸೆಲಿಂಗ್ ಮೂಲಕ ಪ್ರವೇಶ ಉದ್ಯೋಗಾವಕಾಶಗಳು: ವಿಶೇಷ ಕ್ಲಿನಿಕ್ಗಳು, ಖಾಸಗಿ ಪ್ರಾಕ್ಟೀಸ್, ಸರ್ಕಾರ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಆಯುರ್ವೇದ ವೈದ್ಯರಾಗಿ ಕೆಲಸ ಮಾಡಬಹುದು, ಪಾರಂಪರಿಕ ಆಯುರ್ವೇದ ತತ್ತ್ವಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ದೃಢೀಕರಿಸಿ, ಮತ್ತು ಅದನ್ನು ಅಭಿವೃದ್ಧಿಪಡಿಸುವ ಸಂಶೋಧನಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು. ಸಂಶೋಧನಾ ಫೆಲೋಶಿಪ್ ಪಡೆಯಬಹುದು ಅಥವಾ ಖಿಆ ಮುಂದುವರಿಸಬಹುದು, ಶೈಕ್ಷಣಿಕ ಸಂಸ್ಥೆಗಳಲ್ಲಿ ಉಪನ್ಯಾಸಕ ಅಥವಾ ಪ್ರಾಧ್ಯಾಪಕರಾಗಿ ಸೇರಿ, ಮುಂದಿನ ತಲೆಮಾರದ ಆಯುರ್ವೇದ ವೈದ್ಯರನ್ನು ತರಬೇತಿಗೊಳಿಸಬಹುದು., ಆಯುರ್ವೇದದ ಶಾಸ್ತ್ರೀಯ ಜ್ಞಾನವನ್ನು ಆಧಾರವಾಗಿ ತೆಗೆದುಕೊಂಡು ಜೀವನಶೈಲಿ ನಿರ್ವಹಣೆ, ಪ್ರತಿರೋಧಕ ಆರೋಗ್ಯ ಮತ್ತು ಸಮಗ್ರ ಸುಸ್ಥಿತಿಗೆ ಸಂಬಂಧಿಸಿದ ಮಾರ್ಗದರ್ಶನ ನೀಡಬಹುದು., ಶಾಸ್ತ್ರೀಯ ಗ್ರಂಥಗಳ ಮೇಲೆ ಪರಿಣತಿ ಹೊಂದಿರುವ ಕಾರಣ, ಪುಸ್ತಕಗಳು, ಲೇಖನಗಳು, ಇ-ಬುಕ್ಗಳು ಅಥವಾ ಶೈಕ್ಷಣಿಕ ಪಠ್ಯಕ್ರಮಗಳನ್ನು ರಚಿಸುವಲ್ಲಿ ತೊಡಗಿಸಿಕೊಳ್ಳಬಹುದು. ಚರಕ ಸಂಹಿತೆ, ಸುಶ್ರುತ ಸಂಹಿತೆ, ಅಷ್ಟಾಂಗ ಹೃದಯ ಇತ್ಯಾದಿ

## ರವಿರಾಜ್ ಗೆ ಪಿಎಚ್.ಡಿ. ಪದವಿ ಪ್ರಧಾನ :ರವಿರಾಜ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ : ಪಟ್ಟಣದ ರವಿರಾಜ್ ಡಿ ಅವರು ಗಣಿತಶಾಸ್ತ್ರ ವಿಭಾಗದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡು ಜಿಲ್ಲೆಗೆ ಹೆಮ್ಮೆಯನ್ನು ತಂದಿದ್ದಾರೆ. ರವಿರಾಜ್ ಡಿ ಅವರು ರಾಜಸ್ಥಾನದ ಅಲ್ವಾರ ಸನ್ ರೈಸ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.**



ಗಣಿತಶಾಸ್ತ್ರ ವಿಭಾಗದಲ್ಲಿ ಡಾ. ಗೌತಮ್ ಕುಮಾರ್ ರಜಪೂತ ಅವರ ಮಾರ್ಗದರ್ಶನದಲ್ಲಿ, ರವಿರಾಜ್ ಡಿ ಅವರು "ALGEBRAIC GEOMETRY AND CODING THEORY: ERROR - CORRECTING CODES AND AL-GEBRAIC CURVES" ಎಂಬ ಪ್ರಮುಖ ವಿಷಯದ ಕುರಿತು ತಮ್ಮ ಸಂಶೋಧನಾ ಮಹಾಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿದರು. ಅಲ್ವಾರ ಸನ್ ರೈಸ್ ವಿಶ್ವವಿದ್ಯಾಲಯವು ಅವರಿಗೆ ಪಿಎಚ್.ಡಿ. ಪದವಿಯನ್ನು ಪ್ರಧಾನ ಮಾಡಿದೆ.


# ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಬಲವರ್ಧನೆಗಾಗಿ ಶ್ರಮಿಸಿ: ಶಾಸಕ ಆರ್ ಬಸನಗೌಡ ತುರ್ವಿಹಾಳ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸುವ ಮೂಲಕ ಸಮತೋಲಿತ ಕಾಪಾಡಿದ್ದು, ಪಕ್ಷದ ಕಾರ್ಯಕರ್ತರು ಹುಮ್ಮಸ್ಸಿನಿಂದ ಮುಂದಿನ ಗ್ರಾ.ಪಂ, ತಾ.ಪಂ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯ ಎದುರಿಸಬೇಕೆಂದು ಶಾಸಕ ಆರ್.ಬಸನಗೌಡ ತುರವಿಹಾಳ ಹೇಳಿದರು.**

ಮಸ್ಕಿ ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್‌ವತಿಯಿಂದ ಕಾಂಗ್ರೆಸ್ ಕಚೇ-ರಿಯಲ್ಲಿ ಶನಿವಾರ ಆಯೋಜಿಸಲಾಗಿದ್ದ ವಿವಿಧ ಘಟಕಗಳ ಪದಾಧಿಕಾರಿಗಳ ನೇಕಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕಾಂಗ್ರೆಸ್ ಪಕ್ಷಕ್ಕೆ ಸುಧೀರ್ಘ ಇತಿಹಾಸವಿದೆ. ಪಕ್ಷ ಸಮುದ್ರವಿದ್ದಂತೆ. ಪಕ್ಷದ ಕಾರ್ಯಕರ್ತರು ಅಧಿಕಾರ ಸಿಕ್ಕಿಲ್ಲವೆಂದು ಬೇಸರಪಟ್ಟುಕೊಳ್ಳದೆ ಮುಂದಿನ ಚುನಾವಣೆಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಶ್ರಮಿಸಬೇಕೆಂದು ಹೇಳಿದರು.

ನಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ



ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಮಾತನಾಡಿ ಅಧಿಕಾರಕ್ಕೆ ಬರುವ ಮುನ್ನಾ ಘೋಷಣೆ ಮಾಡಿದಂತಹ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಜಾರಿಗೊಳಿಸಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕ್ಷೇತ್ರದಲ್ಲಿ ಪಕ್ಷಕ್ಕೆ ಇನ್ನಷ್ಟು ಬಲ ತುಂಬಿಸಲು ವಿವಿಧ ಘಟಕಗಳಿಗೆ ನೂತನ ಅಧ್ಯಕ್ಷರುಗಳನ್ನು ನೇಮಿಸಲಾಗಿದೆ. ನೂತನ ಅಧ್ಯಕ್ಷರುಗಳು ಪಕ್ಷದ ಕಾರ್ಯಕರ್ತರ ಜತೆಗೂಡಿ ಮುಂಬರುವ ಚುನಾವಣೆಗಳಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಮನೆ ಮನೆಗೆ ತೆರಳಿ ಪ್ರತಿಯೊಬ್ಬರಿಗೆ ತಿಳಿಸುವ ಕೆಲಸವಾಗಬೇಕಾಗಿದೆ ಎಂದು ಹೇಳಿದರು.

ವಿವಿಧ ಘಟಕಗಳಿಗೆ ನೇಮಕ: ಪರಿಶಿಷ್ಟ ಜಾತಿ ವಿಭಾಗದ ನಗರ ಘಟಕದ ಅಧ್ಯಕ್ಷರಾಗಿ ಬಸಪ್ಪ ಜಂಗಮರಹಳ್ಳಿ, ಗ್ರಾಮೀಣ ಘಟಕದ ಅಧ್ಯಕ್ಷರಾಗಿ ಸೋಮನಾಥ ತುರವಿಹಾಳ, ಎಸ್‌ಟಿ ಘಟಕದ ನಗರ ಅಧ್ಯಕ್ಷರಾಗಿ ರಮೇಶ ಕಾಸ್ಲಿ, ಗ್ರಾಮೀಣ ಘಟಕದ ಯಂಕೋಬ ಕನ್ನಟಗಿ, ಪ್ರಚಾರ ಸಮಿತಿಯ ನಗರ ಘಟಕದ ಅಧ್ಯಕ್ಷರಾಗಿ ಜಯಪ್ಪ ಮೆದಿಕಿನಾಳ, ಗ್ರಾಮೀಣ ಘಟಕದ ಅಧ್ಯಕ್ಷರಾಗಿ ಸಂಜಯಕುಮಾರ ಬಳಗಾನೂರ ಇವರುಗಳನ್ನು ನೇಮಿಸಿದ್ದಾರೆ.

ಈ ಸಂದರ್ಭದಲ್ಲಿ ಬ್ಲಾಕ್ ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರುಗಳಾದ ಅಂದಾನಪ್ಪ ಗುಂಡಳ್ಳಿ, ಆದನಗೌಡ ಸಂತೆಕೆಲ್ಲೂರು, ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಮಹಿಬೂಬ ಸಾಬ ಮುದ್ದಾಪೂರು, ಕೆಪಿಸಿಸಿ ಸದಸ್ಯರಾದ ಸಿದ್ಧನಗೌಡ ಮಾಟೂರು, ಅಲ್ಪಸಂಖ್ಯಾತರ ವಿಭಾಗದ ನಗರ ಘಟಕದ ಅಧ್ಯಕ್ಷ ನಿಸ್ಸಾರ ಅಹ್ಮದ್, ಗ್ರಾಮೀಣ ಘಟಕದ ಅಧ್ಯಕ್ಷ ಹುಸೇನ್ ಭಾಷಾ ಬಳಗಾನೂರು ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿದ್ದರು.

# ಅತಿಥಿ ಉಪನ್ಯಾಸಕರ ಹೋರಾಟಕ್ಕೀಗ ಹದಿಹರೆಯ,ತಿರುಗಿಬಿದ್ದರೆ ಬಂದು ತಡೆಯೋರು ಯಾರಯ್ಯ



ನೈಜ್ಯ ದೆಸೆ ನ್ಯೂಸ್

**ಗದಗ: ಡಿ,6:- ಗದಗದ ಜಿಲ್ಲಾಡಳಿತ ಭವನದ ಮುಂದೆ ಕರ್ನಾಟಕ ಸರಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ವತಿಯಿಂದ ಕಳೆದ ತಿಂಗಳು ಇಪ್ಪತ್ತೈದನೇ ತಾ-ರೀಕಿನಿಂದ ಅನಿರ್ದಿಷ್ಟಾವದಿ ಧರಣಿಸತ್ಯಾಗ್ರಹ ನಡೆದು ಇಂದು ಹದಿಮೂರನೇ ದಿನಕ್ಕೆ ಕಾಲಿಟ್ಟಿದೆ. ಹದಿಮೂರು ಅಂದರೆ ಹದಿಹರೆಯಕ್ಕೆ ತಲುಪಿದೆ.ಈಗ ತಿರುಗಿಬಿದ್ದರೆ ತಡೆಯೋರು ಯಾರಯ್ಯ ಎಂಬಂತಾಗಿದೆ.**

ಪೆಟ್ರೋಲ್ ಸುರಿದುಕೊಂಡು,ಚಾಕು ಚುಚ್ಚಿಕೊಂಡು ಆತ್ಮಹತ್ಯಗೆ ಯತ್ನ,ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಗಳ ದಹನ,ಅರೆಬೆತ್ತಲೆ ಪ್ರತಿಭಟನೆಗಳನ್ನು ಮಾಡಲಾಯಿತು. ಆದರೆ ಸರಕಾರದ ಯಾವೊಬ್ಬ ಸಚಿವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡುವುದಿರಲಿ, ಮಾತನಾಡುವ ಕನಿಷ್ಠ ಸೌಜನ್ಯ ಕೂಡ ತೋ-ರಿಸಲಿಲ್ಲ.ಇನ್ನೂ ಅತಿಥಿ ಉಪನ್ಯಾಸಕರು ತಾಳ್ಮೆಯಿಂದಲೇ ಇರಬೇಕಾ ಹಸಿದ ಹೆಬ್ಬುಲಿಗಳಂತಾಗಿರುವ ಪ್ರತಿಭಟನಾಕಾರರು ಮೇಲೆರಗಿದರೆ ತಡೆಯಲು ಬರುವವರು ಯಾರು ಕೂಡಲೆ ಸರಕಾರ ತಾಳ್ಮೆ ಪರೀಕ್ಷೆ ಮಾಡದೆ,ಯು, ಜಿ,ಸಿ, ನಾನ್, ಯುಜಿ,ಸಿ,- ಎಂಬ ಭೇದಭಾವಮಾಡದೆ ಎಲ್ಲರನ್ನೂ ಸೇವಾಭದ್ರತೆಗೊಳಪಡಿಸಬೇಕು.

ಗದಗದ ಹೋರಾಟ ಬೆಳಗಾವಿಯ ಸುವರ್ಣಸೌಧಕ್ಕೆ ವರ್ಗಾವಣೆಯಾದರೆ ಆಕ್ರೋಶ ಇನ್ನೂ ತೀವ್ರವಾಗುವ ಸಾಧ್ಯತೆಗಳಿವೆ. ಕಾರಣ ಸರಕಾರ ಅತಿಥಿಗಳ ಹೋರಾಟಕ್ಕೆ ಸ್ಪಂದಿಸಿ ಬೇಡಿಕೆ ಈಡೇರಿಸಿದರೆ ಸುಮಾರು ಆರುಸಾವಿರ ಅತಿಥಿ ಉಪನ್ಯಾಸಕರ ಕುಟುಂಬಗಳು ಬೀದಿಗೆ ಬೀಳುವುದು ತಪ್ಪುತ್ತದೆ. ಅತಿಥಿ ಉಪನ್ಯಾಸಕರು ನಧಿಗಳೋಪಾದಿಯಲ್ಲಿ ಹರಿದುಬಂದು ಗದಗದ ಹೋರಾಟದ ಸಾಗರದಲ್ಲಿ ಸೇರಿ ಜಯಶಾಲಿಗಳಾಗೋಣ ಎಂಬ ಕರೆ ರಾಜ್ಯಾಧ್ಯಕ್ಷ ಹನುಮಂತಗೌಡ ಕಲ್ಮನಿಯವರದಾಗಿದೆ.

# ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಮೌನೇಶ ಸಾಲವಾಡಗಿ ಅವರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಬಳಗಾನೂರ: ವಿಶ್ವಕರ್ಮ ಸಮಾಜ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡಿರುವ ಮೌನೇಶ್ ಸಾಲವಾಡಗಿ ಅವರಿಗೆ ಬಳಗಾನೂರು ಗ್ರಾಮದ ಶ್ರೀ ಮಾರುತಿ ದೇವಸ್ಥಾನದಲ್ಲಿ ಶ್ರೀ ಮಾರುತಿ ಭಜನಾ ಮಂಡಳಿ, ವಿಶ್ವಕರ್ಮ ಸಮಾಜ ಹಾಗೂ ಗ್ರಾಮದ ಮುಖಂಡರಿಂದ ಸನ್ಮಾನಿಸಿ ಗೌರವಿಸಲಾಯಿತು. ಮಾರುತಿ ದೇವರ ಅರ್ಚಕ ವೆಂಕಟೇಶ್ ಪೂಜಾರಿ ಇವರಿಂದ ಆಶೀರ್ವಾದ ಪಡೆದರು.**

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಸಿದ್ದನಗೌಡ ಚಳ್ಳೂರ್, ಹಿರಿಯ ಕಲಾವಿದ ಮಹಾಬಲೇಶ್ ಹಡಪದ, ಶೇಖರ್‌ಗೌಡ ಜಾಲಿ, ಮಾರುತಿ ದೇವರ ಭಜನಾ ಮಂಡಳಿಯ



ಸದಸ್ಯರಾದ ಶರಣಪ್ಪ ಮರಡ್ಡಿ, ವೀರೇಶ್ ತಾಳಿಕೋಟಿ, ಸಾಹು ಕಾರ್ ಬಸವರಾಜ್ ಸಾಲ್ವಾಡಗಿ, ಸಂತೋಷ ಅಂಬ್ಲಿ, ತಿಮ್ಮಣ್ಣ ಸಾಗರಕ್ಯಾಂಪ್, ಅಂದಾನಪ್ಪ ಕನಸಾವಿ, ಮಲ್ಲಪ್ಪ ಇಸ್ಲಾಂಪುರ್, ಹನುಮಂತಪ್ಪ ಗೋಡೆಕಾರ್, ಮರಿಯಪ್ಪ ಗಚ್ಚಿನಮನೆ, ಅಮರಯ್ಯ ಸ್ವಾಮಿ ಗದ್ದಿಗಿಮಠ, ವೆಂಕಟೇಶ್ ಪೂಜಾರಿ, ವೀರನಗೌಡ ಗದ್ದಿ, ಮಲ್ಲರೆಡ್ಡಿ ಮರಡ್ಡಿ, ಮುದುಕಪ್ಪ ಹೋಟೆಲ್, ವೀರೇಶ್ ಗಳಪೂಜೆ ಶರಣಯ್ಯ ಸ್ವಾಮಿ ಗದ್ದಿಗೆಮಠ, ಅಮರೇಶ್ ಹೆಂಬ, ಮಲ್ಲಾರಾವ್ ಪಠವಾರಿ, ವೀರನಗೌಡ ಶಂಕರಬಂಡಿ, ಪ್ರಭಣ್ಣ ಬಡಿಗೇರ್, ಬಸವರಾಜ ಅಂಬಿ, ಲಕ್ಷಣ ಬೆಲ್ದಾರ್, ಶೇಖರಪ್ಪ ಬಸವರಾಜ ಬಡಿಗೇರ್ ಸುಲ್ತಾನಾಪುರ್, ಹನುಮೇಶ್ ಬಡಿಗೇರ್ ಕಲ್ಲೂರ್, ಇಸ್ಲಾಂಪುರ್, ಪಂಪಾಪತಿ ಯಾಪಲಪರ್ವಿ, ಬಡಿಗೇರ್ ಶರಣಪ್ಪ ಕಂಬಾರ್ ರಾಚಪ್ಪ ಕಲ್ಲೂರ್ ಬಳಗನೂರು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ದಕ್ಷಿಣ ಕಾಶಿ ದೇವಾಲ ಗಾಣಗಾಪೂರದಲ್ಲಿ ಅದ್ದೂರಿ ದತ್ತ ರಥೋತ್ಸವ

ನೈಜ್ಯ ದೆಸೆ ನ್ಯೂಸ್

**ದೇ.ಗಾಣಗಾಪೂರ: ದಕ್ಷಿಣ ಕಾಶಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಗಾಣಗಾಪೂರ ದತ್ತ ಕ್ಷೇತ್ರದಲ್ಲಿ ಸಾವಿರಾರು ಭಕ್ತರ ಸಂಖ್ಯೆ ನಡುವೆ ಭವ್ಯ ಹಾಗೂ ಅದ್ದೂರಿಯಾಗಿ ದತ್ತ ರಥೋತ್ಸವ ಜರುಗಿತು. ದತ್ತ ರಾಜರ ಅಲಂಕಾ-ರಿಕ ಮೂರ್ತಿಗೆ ವೈದಿಕ ಮಂತ್ರೋಚ್ಚಾರಣೆ ಮತ್ತು ಸಕಲ ವಾದ್ಯಗೋಷ್ಠಿಗಳ ನಡುವೆ ಪೂಜಾ ವಿಧಿವಿಧಾನಗಳು ನೆರವೇ-ರಿಸಲಾಯಿತು. ನಂತರ ಜಯಘೋಷಗಳು ಮೊಳಗುತ್ತ ರಥದಲ್ಲಿ ಉತ್ಸವ ಮೂರ್ತಿಗೆ ಪ್ರತಿಷ್ಠಾಪನೆ ಮಾಡಲಾಯಿತು.**



ಪೂಜೆ ಪ್ರತಿಷ್ಠಾಪನೆ ನಂತರ ಭಕ್ತರು ಭಕ್ತಿ ಒಲವಿನಿಂದ ರಥವನ್ನು ಎಳೆದು ಸಾಗಿಸಿದರು. "ಅವಧೂತ ಚಿಂತನ ಶ್ರೀ ಗುರುದೇವ ದತ್ತ ಮಹಾರಾಜಕಿ ಜೈ", "ದಿಗಂಬರ ದಿಗಂಬರ ಶ್ರೀಪಾದ ವಲ್ಲಭ ದಿಗಂಬರ" ಮುಂತಾದ ಗರ್ಜನೆಗಳಿಂದ ಸಮಸ್ತ ಕ್ಷೇತ್ರದ ವಾತಾವರಣ ಭಕ್ತಿಯ ಉಲ್ಲಾಸದಿಂದ ಗದ್ದಲಗೊಳ್ಳಿತು. ಪಾದಸ್ಪರ್ಶದ ನೈವೇದ್ಯವಾಗಿ ಬಾಳೆಹಣ್ಣು, ನಿಂಬೆಹಣ್ಣು, ಉತ್ತತ್ತಿ ಬಾಳೆಹಣ್ಣುಗಳನ್ನು ರಥದ ಕಡೆ ತೂರಿ ಭಕ್ತರು ಭಾವಪೂರ್ಣವಾಗಿ ಸಮರ್ಪಣೆ ಸಲ್ಲಿಸಿದರು. ರಥಯಾತ್ರೆ ದತ್ತನ ದೇವಸ್ಥಾನದಿಂದ ಆರಂಭವಾಗಿ ಹನುಮಾನ ಮಂದಿರದವರೆಗೆ ಸಾಗಿದ ನಂತರ ಮೂಲಸ್ಥಾನಕ್ಕೆ ಕೊಂಡೊಯ್ಯಲಾಯಿತು. ರಥ-'ೋತ್ಸವ ಮಾರ್ಗವನ್ನಾದ್ಯಂತ ರಂಗೋಲಿ ಮತ್ತು ಅಲಂಕಾರಗಳಿಂದ ಅಲಂಕರಿಸಲಾಗಿದ್ದು ಉತ್ಸವದ ವೈಭವಕ್ಕೆ ವಿಶೇಷದಷ್ಟು ಶೋಭೆಯನ್ನು ನೀಡಿತು.

ಈ ಬಾರಿ ರಥೋತ್ಸವದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಿಂದಲೂ ಸಾವಿರಾರು ಭಕ್ತರು ಆಗಮಿಸಿ ಸ್ಥಳೀಯ ಭಕ್ತರೊಂದಿಗೆ ಭಕ್ತಿ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು. ಯಾವುದೇ ಅಡ್ಡಿ?ತೊಡಕುಗಳಿಲ್ಲದಂತೆ ಗಾಣಗಾಪೂರ ಪೊಲೀಸ್ ಠಾಣೆಯ ಪೊಲೀಸ್ ಬಿಗಿ ಬಂದೋಬಸ್ತ ಒದಗಿಸಲಾಗಿತ್ತು.

# ಹಿಜಾಮಾ: ದೇಹಶುದ್ಧಿ ಮತ್ತು ಆರೋಗ್ಯದ ಪ್ರಾಚೀನ ಚಿಕಿತ್ಸೆ :ಡಾ. ಅಬ್ದುಲ್ ರಹೆಮಾನ್ ನಮಾಜ್ ಕಟ್ಟಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರಿನಲ್ಲಿ ಪ್ರತೀ ಶನಿವಾರದಂತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಉಪನ್ಯಾಸ ಕಾರ್ಯಕ್ರಮದಲ್ಲಿ ಇಂದು ನಮ್ಮ ಸನ್ ರೈಸ್ ವಿದ್ಯಾ ಸಂಸ್ಥೆಗೆ ಡಾ.ಅಬ್ದುಲ್ ರಹಮಾನ್ ನಮಾಜ್ ಕಟ್ಟಿ (BUMS) ಇವರು ಆಗಮಿಸಿ ಹಿಜಾಮಾ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು ಈ ಉಪನ್ಯಾಸದಲ್ಲಿ ಹಿಜಾಮಾ ಅಥವಾ ಕಪ್ಪಿಂಗ್ ಥೆರಪಿ ಪ್ರಾಚೀನ ಕಾಲದಿಂದಲೂ ಮಾನವ ಜೀವನದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಉಪಯೋಗಿಸಲ್ಪಟ್ಟಿರುವ ಮಹತ್ವದ ಚಿಕಿತ್ಸಾ ವಿಧಾನವಾಗಿದೆ.**

ಇಸ್ಲಾಮಿಕ್ ವೈದ್ಯಶಾಸ್ತ್ರದಲ್ಲಿಯೂ ಹಿಜಾಮಾಗೆ ವಿಶೇಷ ಸ್ಥಾನವಿದ್ದು, ಮಾನವ ದೇಹದಲ್ಲಿರುವ ಹಾನಿಕರ ಹಾಗೂ ವಿಷಕಾರಿ ಪದಾರ್ಥಗಳನ್ನು ಹೊರತೆಗೆದು ದೇಹವನ್ನು ಶುದ್ಧಗೊಳಿಸುವ ಚಿಕಿತ್ಸೆಯೆಂದು ಪರಿಗಣಿಸಲಾಗಿದೆ. ಇಂದಿನ ಕಾಲದಲ್ಲೂ ಜನ ಆರೋಗ್ಯ ಜಾಗೃತಿಯಿಂದ ಹಿಜಾಮಾವನ್ನು ಹೆಚ್ಚು ಅನುಸರಿಸುತ್ತಿದ್ದಾರೆ. ಹಿಜಾಮಾ ಚಿಕಿತ್ಸೆಯಲ್ಲಿ ದೇಹದ ಕೆಲವು ಪ್ರಮುಖ ಬಿಂದುಗಳ ಮೇಲೆ ವಿಶೇಷ ಕಪ್‌ಗಳನ್ನು ಇಡಲಾಗುತ್ತದೆ. ಆ ಕಪ್‌ಗಳ ಒಳಗೆ ಒತ್ತಡ ಸೃಷ್ಟಿಸುವ ಮೂಲಕ ಆ ಭಾಗದ ರಕ್ತಸಂಚಾರವನ್ನು ಹೆಚ್ಚಿಸಲಾಗುತ್ತದೆ. ಹಿಜಾಮಾ ಎರಡು ವಿಧಗಳಾಗಿವೆ: ಡ್ರೈ ಹಿಜಾಮಾ ಮತ್ತು ವೇಟ್ ಹಿಜಾಮಾ. ಡ್ರೈ ಹಿಜಾಮಾದಲ್ಲಿ ಕಪ್‌ಗಳನ್ನು ಬಳಸಿ ಚುಷಣೆ ಮಾಡಲಾಗುತ್ತದೆ, ಆದರೆ ವೇಟ್ ಹಿಜಾಮಾದಲ್ಲಿ ಚುಷಣೆ ನಂತರ ಚರ್ಮದ ಮೇಲಿನ ಸಣ್ಣ ಕಟ್ಟಗಳ



ಮೂಲಕ ಕೆಟ್ಟ ರಕ್ತವನ್ನು ಹೊರತೆಗೆದು ದೇಹದಲ್ಲಿ ಶುದ್ಧ ರಕ್ತಸಂಚಾರವನ್ನು ಉತ್ತೇಜಿಸಲಾಗುತ್ತದೆ.

ಹಿಜಮಾದ ಪ್ರಮುಖ ಪ್ರಯೋಜನಗಳಲ್ಲಿ ತಲೆನೋವು, ಮೈಗ್ರೇನ್, ಬೆನ್ನುನೋವು, ಸಂಧಿವಾತ, ಸ್ನಾಯು ನೋವು, ಒತ್ತಡ ಕಡಿಮೆಯಾಗುವುದು, ನಿದ್ರೆ ಸುಧಾರಣೆ ಮತ್ತು ರಕ್ತಸಂಚಾರ ಉತ್ತಮಗೊಳ್ಳುವುದು ಸೇರಿವೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಕೆಲವು ಕ್ರೋನಿಕ್ ನೋವಿನ ಸಮಸ್ಯೆಗಳಲ್ಲಿ ಹಿಜಾಮಾ ಉತ್ತಮ ಪರಿಹಾರ ನೀಡುತ್ತದೆ. ಆದರೆ, ಈ ಚಿಕಿತ್ಸೆಯನ್ನು ಅನುಭವ ಹೊಂದಿದ ಹಾಗೂ ತರಬೇತಿ ಪಡೆದ ತಜ್ಞರಿಂದ ಮಾತ್ರ ಮಾಡಿಸಿಕೊಳ್ಳುವುದು ಅತ್ಯಗತ್ಯ. ಶುದ್ಧ ಮತ್ತು ಸ್ಟೆರೈಲ್ ಉಪಕರಣಗಳ ಬಳಕೆ ಇಲ್ಲದಿದ್ದರೆ ಸೋಂಕು ತಗುಲುವ ಅಪಾಯ ಹೆಚ್ಚಾಗುತ್ತದೆ.

ಹಿಜಾಮಾ ಎಲ್ಲರಿಗೂ ಸರಿಹೊಂದುವುದಿಲ್ಲ. ಗರ್ಭಿಣಿಯರು, ರಕ್ತದ ಗಟ್ಟಿಕರಣೆ ಸಮಸ್ಯೆ ಇರುವವರು, ಹೆಚ್ಚು ಬ್ಲಡ್ ಥಿನ್ನರ್ ಔಷಧ ತೆಗೆದುಕೊಳ್ಳುವವರು ವೈದ್ಯ ಸಲಹೆಯ ನಂತರ ಮಾತ್ರ ಹಿಜಾಮಾ ಮಾಡಿಸಿಕೊಳ್ಳಬೇಕು. ಜೊತೆಗೆ, ದೇಹದ ಆರೋಗ್ಯ ಸ್ಥಿತಿಯ ಆಧಾರದ ಮೇಲೆ ಹಿಜಾಮಾ ಮಾಡುವ ಸಮಯ ಮತ್ತು ಅವಧಿಯನ್ನು ತಜ್ಞರು ನಿರ್ಧರಿಸಬೇಕು.ಒಟ್ಟಿನಲ್ಲಿ, ಹಿಜಾಮಾ ಒಂದು ಪ್ರಾಚೀನವಾದರೂ ವೈಜ್ಞಾನಿಕ ದೃಷ್ಟಿಯಿಂದಲೂ ಕೆಲವು ಮಟ್ಟಿಗೆ ಸಹಾಯಕವೆಂದು ತೋರಿಸಿರುವ ಪ್ರಾಕೃತಿಕ ಚಿಕಿತ್ಸಾ ವಿಧಾನ. ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ವ್ಯಕ್ತಿಯಿಂದ ಮಾಡಿಸಿಕೊಂಡರೆ ದೇಹ ಮತ್ತು ಮನಸ್ಸಿಗೆ ಆರೈಕೆ ನೀಡುವ ಸೌಮ್ಯ ಚಿಕಿತ್ಸೆ ಎನ್ನಬಹುದು. ಈ ಕಾರಣಕ್ಕೆ ಇಂದು ಹಿಜಾಮಾ ವಿಶ್ವದಾದ್ಯಂತ ಜನಪ್ರಿಯವಾಗುತ್ತಿದೆ ಎಂದು ಹೇಳಿ ನರ್ಸಿಂಗ್ ನ ಮಹತ್ವದ ಕುರಿತು ಮಾತನಾಡಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದರೂ ಹಾಗೂ ಶನಿವಾರದ ವಿಶೇಷ ಉಪನ್ಯಾಸ ಮಾಡಿದರು.